ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1638
ಸದಸ್ಯರ ಹೆಸರು	:	ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	11.03.2022.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮೀಣ ಭಾಗದ ಮನೆಗಳಿಗೆ ನಂಬರ್ ಪಟ್ಟಿ ಅಂಟಿಸುವುದನ್ನು ಸರ್ಕಾರ ಅಥವಾ ಖಾಸಗಿಯವರಿಗೆ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾವ ಕಾರಣಕ್ಕೆ ಈ ಚೀಟಿಯನ್ನು ಅಂಟಿಸುವ ಯೋಜನೆಯನ್ನು ಮಾಡಲಾಗಿದೆ; (ವಿವರ ನೀಡುವುದು)	ಇಲ್ಲ.
(ಆ)	ರಾಜ್ಯದ ಹಲವು ಜಿಲ್ಲೆಗಳಲ್ಲಿ ಖಾಸಗಿ ಕಂಪನಿಗಳು ಹಾಗೂ ಎಸ್.ಬಿ ನಂಬರಿಂಗ್ ವರ್ಕ್ ಲಿ. ಎಂಬ ಕಂಪನಿಯ ಸಿಬ್ಬಂದಿಗಳು ಗ್ರಾಮೀಣ ಭಾಗದ ಮನೆಗಳಿಗೆ ತೆರಳಿ ಕೈ ಬರಹದ ಚೀಟಿಗಳನ್ನು 50 ರೂಗಳನ್ನು ಪ್ರತಿ ಮನೆಗಳಿಂದ ಪಡೆದು ಅಂಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದು ಸರ್ಕಾರದ ಯೋಜನೆಯೇ; ಈ ರೀತಿ ಚೀಟಿಯನ್ನು ಅಂಟಿಸಲು ಹಣ ನಿಗಧಿ ಮಾಡಿರುವುದು ಯಾರು; ಇದಕ್ಕೆ ಕಾರಣವೇನು; (ಮಾಹಿತಿ ಹಾಗೂ ಕಾರಣ ನೀಡುವುದು)	ಬಂದಿಲ್ಲ.
(ಇ)	ಈ ಯೋಜನೆ ಸರ್ಕಾರದಲ್ಲಿ ಇಲ್ಲವಾದಲ್ಲಿ, ಈ ರೀತಿ ಚೀಟಿ ಅಂಟಿಸುವ ಕಾರ್ಯವನ್ನು ಮಾಡುತ್ತಿರುವ ಖಾಸಗಿ ಕಂಪನಿಯ ಮೇಲೆ ಪೊಲೀಸ್ ಕೇಸನ್ನು ಮಾಡಲು ಸರ್ಕಾರದ ಕ್ರಮಗಳೇನು; ಇದರಲ್ಲಿ ಸ್ಥಳೀಯ ಅಧಿಕಾರಿಗಳು ಭಾಗಿಯಾಗಿದ್ದಲ್ಲಿ ಅವರುಗಳ ಮೇಲೆ ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದೆ? (ವಿವರ ನೀಡುವುದು)	ಒಂದು ವೇಳೆ ಗ್ರಾಮೀಣ ಭಾಗದ ಮನೆಗಳಿಗೆ ನಂಬರ್ ಪಟ್ಟಿ ಅಂಟಿಸುವ ಕಾರ್ಯವನ್ನು ಮಾಡುತ್ತಿರುವ ಖಾಸಗಿ ಕಂಪನಿಯ ಮೇಲೆ ಪೊಲೀಸ್ ಕೇಸನ್ನು ಸ್ಥಳೀಯವಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ದಾಖಲಿಸಬಹುದಾಗಿದೆ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಶಿಸ್ತು ಕ್ರಮ ಜರುಗಿಸಬಹುದಾಗಿದೆ.

ಸಂಖ್ಯೆ: ಗ್ರಾಅಪ 94 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.